# ಕರ್ನಾಟಕ ಲೋಕಸೇವಾ ಆಯೋಗ

ಸಂಖ್ಯೆ: ಇ(1)2930/2020-21/ಪಿಎಸ್‌ಸಿ

ಲೋಕ ಸೇವಾ ಆಯೋಗದ ಕಛೇರಿ,
"ಉದ್ಯೋಗ ಸೌಧ",
ಬೆಂಗಳೂರು, ದಿನಾಂಕ:21-08-2020.

## :: ಪ್ರಕಟಣೆ ::

ಆಯೋಗವು 2017-18ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ 106 ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ದಿನಾಂಕ:24-08-2020ರಂದು ಪೂರ್ವಭಾವಿ ಪರೀಕ್ಷೆಯನ್ನು ನಡೆಸಲು ನಡೆಸಲಾಗುತ್ತಿದ್ದು, ಪ್ರಸ್ತುತ ರಿಟ್ ಪಿಟಿಷನ್ ಸಂಖ್ಯೆ:9260/2020 ರಲ್ಲಿನ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಸದರಿ ಪರೀಕ್ಷೆಗೆ ಅಂಧ/ದೃಷ್ಟಿಮಾಂಧ್ಯ ಮೀಸಲಾತಿ ಕೋರಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಪ್ರತಿ ಒಂದು ಗಂಟೆಗೆ 20 ನಿಮಿಷ ಹೆಚ್ಚುವರಿ ಸಮಯವನ್ನು ನೀಡಲಾಗುತ್ತಿದೆ.

ಮುಂದುವರೆದು, ಪೂರ್ವಭಾವಿ ಪರೀಕ್ಷೆಗೆ ಸರ್ಕಾರದ ದಿನಾಂಕ:30-10-2007ರ ಆದೇಶದ ಮೇರೆಗೆ ಅಂಧ/ದೃಷ್ಟಿಮಾಂಧ್ಯ ಅಭ್ಯರ್ಥಿಗಳು ಲಿಪಿಕಾರರನ್ನು ತಾವೇ ಕರೆದುಕೊಂಡು ಬರಬೇಕೆಂದು ನಮೂದಾಗಿರುತ್ತದೆ. ಯಾವುದೇ ಅಭ್ಯರ್ಥಿಯು ಲಿಪಿಕಾರರನ್ನು ಕರೆದುಕೊಂಡು ಬರಲು ಸಾಧ್ಯವಿಲ್ಲದಿದ್ದ ಪಕ್ಷದಲ್ಲಿ ಅಂತಹ ಅಭ್ಯರ್ಥಿಗಳು ಆಯೋಗಕ್ಕೆ ಮಾಹಿತಿ ನೀಡಲು SMS ಕಳುಹಿಸಲಾಗಿದೆ. ಇಂತಹ ಅಭ್ಯರ್ಥಿಗಳಿಗೆ ಆಯೋಗದಿಂದ ಲಿಪಿಕಾರರನ್ನು ಒದಗಿಸಲು ಎಲ್ಲಾ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದು.

ಸದರಿ ವಿಷಯದ ಕುರಿತು ತಿದ್ದುಪಡಿಯನ್ನು ಆಯೋಗದ ವೆಬ್‌ಸೈಟ್ **http://kpsc.kar.nic.in/** ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ.

(ಜಿ.ಸತ್ಯವತಿ)
ಕಾರ್ಯದರ್ಶಿ,
ಕರ್ನಾಟಕ ಲೋಕ ಸೇವಾ ಆಯೋಗ.